


# ಕುಲಾಂತರಿ ಬೆಳೆಗಳ ಪ್ರಯೋಗಕ್ಕಿಲ್ಲ ಅವಕಾಶ

## ವೈಜ್ಞಾನಿಕ ಕ್ಷೇತ್ರ ಪ್ರಯೋಗದ ನಿರ್ಧಾರ ಕೈಬಿಟ್ಟ ಕೇಂದ್ರ ಸರ್ಕಾರ I ಕರ್ನಾಟಕದಲ್ಲೂ ಇತ್ತು ಪ್ರಸ್ತಾವನೆ

**ನವದೆಹಲಿ:** ಆರ್‌ಎಸ್‌ಎಸ್ ಅಂಗಸಂಸ್ಥೆ ಭಾರತೀಯ ಕಿಸಾನ್ ಸಂಘದ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ, ಕುಲಾಂತರಿ ಬೆಳೆಗಳ ವೈಜ್ಞಾನಿಕ ಪ್ರಯೋಗ ಕೈಗೊಳ್ಳುವ ನಿರ್ಧಾರದಿಂದ ಹಿಂದೆ ಸರಿದಿದೆ. ದೇಶೀಯವಾಗಿ ಅಭಿವೃದ್ಧಿ ಪಡಿಸಿದ ಬಿಟಿ ಬದನೆ ಸೇರಿ ಯಾವುದೇ ಕುಲಾಂತರಿ ತಳಿಗಳ ಪ್ರಯೋಗಗಳಿಗೆ ಅವಕಾಶ ನೀಡುವುದಿಲ್ಲ ಎಂದು ಅದು ಸ್ಪಷ್ಟಪಡಿಸಿದೆ.

ಜೆನೆಟಿಕ್ ಇಂಜಿನಿಯರಿಂಗ್ ಅಪ್ರೈಸಲ್ ಕಮಿಟಿ (ಜಿಇಎಸಿ) ಕಳೆದ ವರ್ಷ ಕರ್ನಾಟಕ, ಮಧ್ಯಪ್ರದೇಶ, ಬಿಹಾರ, ಛತ್ತೀಸಗಢ, ಜಾರ್ಖಂಡ್, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳಗಳಲ್ಲಿ 2020-23ರ ಅವಧಿಯಲ್ಲಿ ಬಿಟಿ ಬದನೆಯ ಎರಡು ಮಾದರಿಗಳ ವೈಜ್ಞಾನಿಕ ಪ್ರಯೋಗಕ್ಕೆ ಅನುಮತಿ ನೀಡಿತ್ತು. ಭಾರತೀಯ ಕಿಸಾನ್ ಸಂಘ ಮತ್ತು ಇತರ ರೈತ ಸಂಘಟನೆಗಳು ಇದನ್ನು ವಿರೋಧಿಸಿದ್ದವು. ಸತತ ಏಳು ಬಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿಯೋಗವನ್ನು ಕರೆದೊಯ್ದು ಬಿಟಿ ಬದನೆಯ ವೈಜ್ಞಾನಿಕ ಕ್ಷೇತ್ರ ಪ್ರಯೋಗಕ್ಕೆ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್‌ಒಸಿ) ನೀಡದಂತೆ ಮನವಿ ಮಾಡಿದ್ದವು. ತಮಿಳುನಾಡು ವಿವಸಾಯಿಗಳ್ ಸಂಗಂ ಕೂಡ ಕುಲಾಂತರಿ ತಳಿಗಳ ಪ್ರಯೋಗಕ್ಕೆ ಎನ್‌ಒಸಿ ನೀಡಬಾರದು ಎಂದು ರಾಜ್ಯ ಸರ್ಕಾರಗಳನ್ನು ಆಗ್ರಹಿಸಿತ್ತು. ಈ ಮನವಿಗಳ ಸಂಕ್ಷಿಪ್ತ ಮಾಹಿತಿಯನ್ನು ಕೇಂದ್ರ ಪರಿಸರ ಸಚಿವ ಪ್ರಕಾಶ ಜಾವಡೇಕರ್ ಸೋಮವಾರ ರಾಜ್ಯಸಭೆಗೆ ಲಿಖಿತ ರೂಪದಲ್ಲಿ ನೀಡಿದ್ದು, ಬಿಟಿ ಬದನೆ ಸೇರಿ ಯಾವುದೇ ಕುಲಾಂತರಿ ತಳಿಗಳ ಪ್ರಯೋಗದ ಪ್ರಸ್ತಾವನೆಯನ್ನು ಜಿಇಎಸಿ ನೀಡಿರುವ ಶಿಫಾರಸು ಆಧರಿಸಿ ತೆಗೆದುಕೊಳ್ಳಲಾಗದು. ಆಯಾ ರಾಜ್ಯ/ಕೇಂದ್ರಾಡಳಿತವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯಲಾಗುತ್ತದೆ ಎಂದಿದ್ದಾರೆ.

**ಕ್ಷೇತ್ರ ಪ್ರಯೋಗ ಯಾಕೆ?:** ಇಂತಹ ಬೆಳೆಗಳ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾದರೆ ವೈಜ್ಞಾನಿಕ ಕ್ಷೇತ್ರ ಪ್ರಯೋಗ ಆಗಿರಬೇಕು ಎಂಬ ನಿಯಮವಿದೆ.



### ಜಿಇಎಸಿ ಹೇಳಿದ್ದೇನು?

ಬಿಟಿ ಬದನೆ ಸೇರಿ ಕುಲಾಂತರಿ ತಳಿಗಳ ವೈಜ್ಞಾನಿಕ ಕ್ಷೇತ್ರ ಪ್ರಯೋಗ ಮಾಡುವ ಮುನ್ನ ಆಯಾ ರಾಜ್ಯ ಸರ್ಕಾರದಿಂದ ಎನ್‌ಒಸಿ ಪಡೆಯುವುದು ಮುಖ್ಯ. ಪ್ರತ್ಯೇಕವಾಗಿರುವ ಜಮೀನು ಗುರುತಿಸಿ ಬೇರಾವುದೇ ತೊಂದರೆ ಆಗುವುದಿಲ್ಲ ಎಂಬುದನ್ನು ಖಾತರಿಪಡಿಸಿ ಕೊಂಡೇ ಈ ಪ್ರಯೋಗ ಮಾಡಬೇಕು ಎಂದು ಜಿಇಎಸಿ ತನ್ನ ಆದೇಶದಲ್ಲಿ ಹೇಳಿದೆ.

### ಪರಿಗಣನೆಯಲ್ಲಿದ್ದ ಕುಲಾಂತರಿ ಬೆಳೆ

- ಕರ್ನಾಟಕ -ಹತ್ತಿ
- ಪಂಜಾಬ್ - ಸಾಸಿವೆ, ಜೋಳ
- ಹರಿಯಾಣ - ಜೋಳ,ಹತ್ತಿ
- ರಾಜಸ್ಥಾನ - ಹತ್ತಿ
- ದೆಹಲಿ - ಸಾಸಿವೆ
- ಗುಜರಾತ್ - ಹತ್ತಿ, ಜೋಳ
- ಮಹಾರಾಷ್ಟ್ರ - ಹತ್ತಿ, ಜೋಳ, ಬದನೆ, ಭತ್ತ
- ಆಂಧ್ರಪ್ರದೇಶ - ಹತ್ತಿ, ಕಡಲೆ

(ಬಿಟಿ ಹತ್ತಿಯನ್ನು ವಾಣಿಜ್ಯವಾಗಿ ಬೆಳೆಯುವುದಕ್ಕೆ ಸರ್ಕಾರ ಅನುಮತಿ ನೀಡಿದೆ. ಅದು ಬಿಟ್ಟರೆ ಬೇರಾವುದೇ ಬೆಳೆಗೆ ವಾಣಿಜ್ಯ ಅನುಮತಿ ನೀಡಿಲ್ಲ ಎಂದು ಸರ್ಕಾರ ಸಂಸತ್ತಿಗೆ ತಿಳಿಸಿದೆ)

25-03-2021 Vv Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

# ಮಂಡ್ಯದ ಬೆಲ್ಲ ಕಹಿಯಾಗುತ್ತಿರುವುದು ದುರಂತ

ಶತಮಾನಗಳಿಂದ ಜನತೆಯೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿರುವ 'ಮಂಡ್ಯದ ಬೆಲ್ಲ'ದ ಸಿಹಿಯು ಇದೀಗ ಕಡಿಮೆಯಾಗುತ್ತಿರುವುದು ದುಃಖಕರ ವಿಚಾರ. ಮಂಡ್ಯ ಎಂದಾಕ್ಷಣ ತಟ್ಟನೆ ನೆನಪಿಗೆ ಬರುವುದು ಕಾವೇರಿ, ಕಬ್ಬು ಹಾಗೂ ಬೆಲ್ಲ. ಮಂಡ್ಯದ ಜನತೆಯು ಈ ಮೂರು ವಸ್ತುಗಳನ್ನು ಇಂದಿಗೂ ದೇವರೆಂದು ಪೂಜಿಸುತ್ತಿದ್ದಾರೆ. ಮಂಡ್ಯ ಜಿಲ್ಲೆ ಮೂಲತಃ ಒಣಭೂಮಿ. 1932ರಲ್ಲಿ ವಿಶ್ವೇಶ್ವರಯ್ಯನವರು ಮಂಡ್ಯಕ್ಕೆ ನೀರು ಹರಿಸಿದರೆ, ಕೆನಡಾದ ಕೃಷಿ ತಜ್ಞ ಲೆಸ್ಲಿ.ಸಿ.ಕೋಲ್ಮನ್‌ರವರು ಕಬ್ಬನ್ನು ಪರಿಚಯಿಸಿದರು.

ಬೆಲ್ಲವು ಮಂಡ್ಯದ ಲಕ್ಷಾಂತರ ಜನರಿಗೆ ಉದ್ಯೋಗವನ್ನು ಒದಗಿಸಿದೆ. ಇಲ್ಲಿನ ಜನತೆಗೆ ಕಾವೇರಿ ಜೀವನದಿಯಾದರೆ, ಬೆಲ್ಲವು ಜೀವನಾಡಿ. ಬೆಲ್ಲದ ಕಾರಣದಿಂದ ಇಲ್ಲಿನ ರೈತರು ಆರ್ಥಿಕವಾಗಿ ಪ್ರಬಲರಾದರು. ದಿನಕಳೆದಂತೆ ಮಂಡ್ಯದಲ್ಲಿನ ಗುಣಮಟ್ಟದ ಬೆಲ್ಲವು ದೇಶ-ವಿದೇಶಗಳಲ್ಲಿ ಪ್ರಸಿದ್ಧಿ ಪಡೆಯಿತು. ಕಾರಣ ಮಂಡ್ಯ ಬೆಲ್ಲ ಎಂದಿಗೂ ಗುಣಮಟ್ಟದಲ್ಲಿ ರಾಜಿಯಾಗುವುದಿಲ್ಲ ಎಂಬ ಮಾತು ಮನೆಮಾಡಿತ್ತು. ಆಲೆಮನೆಗಳ ಮಾಲಿಕರು ಲಾಭವನ್ನು ಲೆಕ್ಕಿಸದೇ ಗುಣಮಟ್ಟವನ್ನು ಕಾಪಾಡಿಕೊಂಡಿದ್ದರು.



ಪತ್ರಮಿತ್ರ

ಇಲ್ಲಿನ ಬಂಗಾರದ ಬಣ್ಣದ ಬೆಲ್ಲವು ರುಚಿ ಹಾಗೂ ಶುಚಿಯಲ್ಲಿ ಇಡೀ ವಿಶ್ವವನ್ನೇ ಸೆಳೆದಿತ್ತು. ವರ್ಷಪೂರ್ತಿ ಮಂಡ್ಯದ ಆಲೆಮನೆಗಳು ಪ್ರಾರಂಭವಿದ್ದರೂ ಬೇಡಿಕೆಯಷ್ಟು ಬೆಲ್ಲದ ಉತ್ಪಾದನೆಯಾಗುತ್ತಿರಲಿಲ್ಲ. ಬೇಡಿಕೆಯನ್ನು ನೀಗಿಸಲು ಮಾಲಿಕರು ಕಷ್ಟಕರ ಹವಾಮಾನ ಹಾಗೂ ಕಾರ್ಮಿಕರ ತೊಂದರೆಯಲ್ಲಿಯೂ ಬೆಲ್ಲವನ್ನು ಉತ್ಪಾದಿಸುತ್ತಿದ್ದರು.

ಆದರೆ ವಿಶ್ವವ್ಯಾಪಿಯಾದ ಬೇಡಿಕೆಯು ಮಂಡ್ಯದ ಬೆಲ್ಲಕ್ಕೆ ಮುಳುವಾಯಿತೇನೋ. ಬೇರೆ ಬೆಲ್ಲಕ್ಕೆ ಮಂಡ್ಯದ ಬೆಲ್ಲದಷ್ಟು ಬೇಡಿಕೆಯಿರಲಿಲ್ಲ. ದಿನಕಳೆದಂತೆ ನಿರೀಕ್ಷಿಸಿದಷ್ಟು ಮಂಡ್ಯದ ಬೆಲ್ಲವನ್ನು ಉತ್ಪಾದಿಸಲು ಆಲೆಮನೆಗಳು ಕಾರ್ಮಿಕರ ತೊಂದರೆಯನ್ನು ಅನುಭವಿಸಿದವು. ಕೆಲವು ಆಲೆಮನೆಗಳು ಮುಚ್ಚಿದವು. ಕೆಲವು ಆಲೆಮನೆಯವರು ಉತ್ತರ ಭಾರತದ ಕಾರ್ಮಿಕರನ್ನು ಕರೆತಂದರು. ಹೀಗಾಗಿ ಉತ್ತರಭಾರತದ ಕಾರ್ಮಿಕರ ಮೇಸ್ತ್ರಿಗಳು ಕೆಲಸ ನಿರ್ವಹಿಸುತ್ತಲೆ ಮಂಡ್ಯದ ಬೆಲ್ಲದ ಮಾರುಕಟ್ಟೆಯ ಮಾಹಿತಿ ಅರಿತು ಆಲೆಮನೆಗಳನ್ನು ಗುತ್ತಿಗೆ ಪಡೆದು ಬೆಲ್ಲದ ಉತ್ಪಾದನೆ ಪ್ರಾರಂಭಿಸಿದರು. ಮಂಡ್ಯದ ಆಲೆಮನೆ ಮಾಲಿಕರೂ ಸಹ ದಿನನಿತ್ಯದ ಕಾರ್ಮಿಕರ ಕಿರಿಕಿರಿಯಿಂದ ಬೇಸತ್ತು ಗುತ್ತಿಗೆ ಕೊಟ್ಟರು.

ಕೇವಲ ಲಾಭವನ್ನೇ ಗುರಿಯಾಗಿಸಿದ ಮೇಸ್ತ್ರಿಗಳು ಗುಣಮಟ್ಟ ನಿರ್ಲಕ್ಷಿಸಿದರು. ಬೆಲ್ಲವನ್ನು ಬಂಗಾರದ ಬಣ್ಣದಂತೆ ಹೊಳೆಯಲು ಹಾಗೂ ಹೆಚ್ಚೆಚ್ಚು ಉತ್ಪಾದಿಸಲು ಅಪಾಯಕಾರಿ ರಾಸಾಯನಿಕಗಳನ್ನು ಕಲಬೆರಕೆ ಮಾಡಿದರು. ಕೆಲವೇ ದಿನಗಳಲ್ಲಿ ಬಂಗಾರದ ಬಣ್ಣದಂತಿರುವ ಬೆಲ್ಲವು ಆರೋಗ್ಯಕ್ಕೆ ಹಾನಿಕರ ಎಂದು ಪ್ರಚಾರವಾಗಿ ವಹಿವಾಟು ಕಡಿಮೆಯಾಯಿತು. ಇದರಿಂದ ಪಾರಾಗಲು ಸಾವಯವ ಎಂಬ ಹೆಸರಿನ ಹಗಲು ದರೋಡೆ ಪ್ರಾರಂಭವಾಯಿತು. ಭಾರತದಲ್ಲಿ 90%ರಷ್ಟು ಜನತೆಯು ಸಾವಯವ ಹೆಸರಿನ ಬೆಲ್ಲ ಸೇರಿದಂತೆ ಯಾವುದೇ ಉತ್ಪನ್ನಗಳನ್ನು ಪರೀಕ್ಷಿಸದೇ ಖರೀದಿಸುತ್ತಾರೆ. ಈ ಪರಿಸ್ಥಿತಿಯನ್ನು ದುರುಪಯೋಗ ಪಡೆದುಕೊಂಡ ಉತ್ಪಾದಕರು ಕಪ್ಪು ಬಣ್ಣದ ಬೆಲ್ಲವು ಸಾವಯವ ಬೆಲ್ಲ ಹಾಗೂ ಬಂಗಾರದ ಬಣ್ಣದ ಬೆಲ್ಲವು ರಾಸಾಯನಿಕ ಎಂಬಂತೆ ಮಾರುಕಟ್ಟೆಯಲ್ಲಿ ಬಿಂಬಿಸಿ ಮತ್ತೆ ಲಾಭವನ್ನು ಪಡೆದರು. ಪಕ್ವವಾದ ಕಬ್ಬನ್ನು ಕಟಾವು ಮಾಡಿ ಕೇವಲ ಎಂಟು ತಾಸಿನೊಳಗೆ ಉಪಯೋಗಿಸಿದಲ್ಲಿ ಮಾತ್ರ ಉತ್ಕೃಷ್ಟ ಗುಣಮಟ್ಟದ ಬೆಲ್ಲವು ಉತ್ಪಾದನೆಯಾಗುತ್ತದೆ. ಆದರೆ ಇಂದಿನ ವೇಗ ಹಾಗೂ ಇತರೆ ಬೆಲ್ಲವನ್ನು ಮಂಡ್ಯದ ಬ್ಯಾಂಡ್ ಮಾಡುವ ಕಾರಣದಿಂದ ಹೆಸರು ಕೆಡಲಾರಂಭಿಸಿತು. ಹೀಗಾಗಿ ಇಂದಿನ ಮಂಡ್ಯದ ಬೆಲ್ಲವನ್ನು ಇತರೆ ರಾಜ್ಯಗಳು ಪರೀಕ್ಷಿಸುತ್ತಿದ್ದು, ಬೆಲ್ಲದ ಕಹಿ ಹೊರಬಿದ್ದಿರುವುದು ದುರದೃಷ್ಟಕರ.

ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಜಾಣ್ಮೆಯಿಂದ ಕರ್ನಾಟಕದ ಹೆಮ್ಮೆ ಎನಿಸಿದ ಮಂಡ್ಯದ ಬೆಲ್ಲದ ಗತವೈಭವವನ್ನು ಮರಳಿಸಬೇಕು. ಅದಕ್ಕಾಗುವ ನೆರವನ್ನು ನೀಡಬೇಕು.

–ಬಸವರಾಜ ಶಿವಪ್ಪ, ಗಿರಗಾಂವಿ

25-03-2021 Hd Pg 06




# ಚಹಾ ತೋಟದ ಕಾರ್ಮಿಕರ ಬವಣೆಗೆ ಹೊಣೆ ಯಾರು?

■ ರಾಘವ ಶರ್ಮ ನಿಡ್ಲೆ ಗುವಾಹಟಿ (ಅಸ್ಸಾಂ)

**ಮಾ**ರ್ಚ್ 2ರಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ವಾದ್ರಾ ಗಾಂಧಿ ಅಸ್ಸಾಂನ ತೇಜ್‌ಪುರದಲ್ಲಿರುವ ಚಹಾ ತೋಟಕ್ಕೆ (ಟೀ ಗಾರ್ಡನ್) ಭೇಟಿ ಕೊಟ್ಟು, ಕಾರ್ಮಿಕರ ಗುಡಿಸಲಲ್ಲೂ ಒಂದಿಷ್ಟು ಸಮಯ ಕಳೆದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಚಹಾ ತೋಟದ ಕಾರ್ಮಿಕರ ದಿನಗೂಲಿಯನ್ನು ₹ 365ಕ್ಕೆ ಏರಿಸಲಿದ್ದೇವೆ ಎಂದು ಪ್ರಿಯಾಂಕಾ ಭರವಸೆ ಕೊಟ್ಟು ಬಂದಿದ್ದಾರೆ. ಏತನ್ಮಧ್ಯೆ, ರ್‍ಯಾಲಿಯೊಂದರಲ್ಲಿ ಪ್ರಧಾನಿ ನರೇಂದ್ರ ಮೋದಿ, ಅಸ್ಸಾಂ ಚಹಾ ಉದ್ಯಮದ ವಿರುದ್ಧ ಅಂತಾರಾಷ್ಟ್ರೀಯ ಪಿತೂರಿ ನಡೆದಿದೆ ಎಂದು ಗುಡುಗಿದ್ದಾರೆ. ರಾಜ್ಯದ 126ರಲ್ಲಿ ಸುಮಾರು 40 ವಿಧಾನಸಭೆ ಕ್ಷೇತ್ರಗಳ ಮತದಾನದಲ್ಲಿ ಮಹತ್ವದ ಪಾತ್ರವಹಿಸುವ ಈ ಕಾರ್ಮಿಕರು ಈ ಬಾರಿ ಯಾರಿಗೆ ವೋಟು ಹಾಕುತ್ತಾರೆ ಎಂಬುದು ಸದ್ಯ ಕಾಡುತ್ತಿರುವ ಪ್ರಶ್ನೆ.

ಪ್ರತಿ ಚುನಾವಣೆ ಬಂದಾಗಲೂ, ಇಲ್ಲಿನ ಕಾರ್ಮಿಕರ ಶೋಚನೀಯ ಬದುಕು ಚರ್ಚೆಯ ಮುನ್ನೆಲೆಗೆ ಬರುತ್ತದೆ ಮತ್ತು ಎಲ್ಲ ಪಕ್ಷಗಳು ನಾ ಮುಂದು ತಾ ಮುಂದು ಎಂಬಂತೆ ಕಾರ್ಮಿಕರತ್ತ ತೆರಳಿ, ಮಾಧ್ಯಮದ ಮುಂದೆ ಆಶ್ವಾಸನೆಗಳ ಸುರಿಮಳೆಯನ್ನೇ ಸುರಿಸುತ್ತಾರೆ. ಆದರೆ, ಈ ಕಾರ್ಮಿಕರ ಬದುಕು ಮಾತ್ರ ಸುಧಾರಿಸಿಲ್ಲ. 'ಕೇರಳದಲ್ಲಿ ಓರ್ವ ಚಹಾ ತೋಟದ ಕಾರ್ಮಿಕನಿಗೆ ₹ 380 ದಿನಗೂಲಿಯಿದೆ. ಹಾಗಾದರೆ, ನಾವೇನು ತಪ್ಪು ಮಾಡಿದ್ದೇವೆ? ದಿನಸಿ ಸಾಮಗ್ರಿಗಳ ಬೆಲೆ ಗಗನಕ್ಕೇರಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ದುಡ್ಡು ಬೇಕು. ಆಸ್ಪತ್ರೆಗಳಿಗೆ ಕಾಲಿಟ್ಟರೆ ಹಣವನ್ನೇ ದೋಚುತ್ತಾರೆ. ಇವೆಲ್ಲವನ್ನೂ ಈ ಕಡಿಮೆ ಹಣದಲ್ಲಿ ಹೇಗೆ ನಿಭಾಯಿಸುವುದು ಹೇಳಿ' ಎಂದು ಪ್ರಶ್ನಿಸುತ್ತಾರೆ ನಾಗಾಂವ್ ಜಿಲ್ಲೆಯ ಕಥಿಯಾಟೋಲಿಯ ಟೀ ಗಾರ್ಡನ್ ಕಾರ್ಮಿಕ ಮಹಿಳೆ ಸೀತಾ. ನಮ್ಮ ಕಷ್ಟ, ನೋವುಗಳು ನಿರಂತರ ಎನ್ನುವುದಾದರೆ ನರೇಂದ್ರ ಮೋದಿ ಅಥವಾ ರಾಹುಲ್ ಗಾಂಧಿಯವರ ಪಕ್ಷಕ್ಕೆ ವೋಟು ಹಾಕಿ ಪ್ರಯೋಜನವೇನು ಎನ್ನುವುದು ಅವರ ಪ್ರಶ್ನೆ.

ಮುಖ್ಯಮಂತ್ರಿ ಸರ್ಬಾನಂದ ಸೋನೋವಾಲ್ ನೇತೃತ್ವದ ಬಿಜೆಪಿ ಸರ್ಕಾರ 2016ರಲ್ಲಿ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಕಾರ್ಮಿಕರ ಬವಣೆಗೆ ಪರಿಹಾರ ಒದಗಿಸಲೆಂದೇ ಸಲಹಾ ಮಂಡಳಿಯೊಂದನ್ನು ರಚನೆ ಮಾಡಿತು. ಕಾರ್ಮಿಕರ ದಿನಗೂಲಿಯನ್ನು ₹ 351ಕ್ಕೆ ನಿಗದಿಗೊಳಿಸಬೇಕು ಎನ್ನುವುದು ಮಂಡಳಿ ಶಿಫಾರಸಾಗಿತ್ತು. ಅಸ್ಸಾಂ ಚಹಾ ಮಜ್ದೂರ್ ಸಂಘ ಕೂಡ ಕನಿಷ್ಠ ದಿನಗೂಲಿ ₹ 351 ಇರಬೇಕು ಎಂದು ಒತ್ತಾಯಿಸಿದೆ. ಆದರೆ, ₹ 137 ಇದ್ದ ದಿನಗೂಲಿಯನ್ನು ಸರ್ಕಾರ ₹ 167ಕ್ಕೆ ಏರಿಸಿತು. ಚುನಾವಣೆ ಹತ್ತಿರವಿದ್ದಂತೆ, ಫೆಬ್ರವರಿಯಲ್ಲಿ ದಿನಗೂಲಿಯನ್ನು ₹ 217ಕ್ಕೆ ನಿಗದಿಗೊಳಿಸಲಾಯಿತು. ಅಂದರೆ, ಬಿಜೆಪಿ ಅಧಿಕಾರಕ್ಕೆ ಬಂದ ನಂತರ ದಿನಗೂಲಿಯಲ್ಲಿ ಒಟ್ಟು ₹ 80 ಏರಿಕೆಯಾಗಿದೆ.

ಅಸ್ಸಾಂನಲ್ಲಿ
**ವಿಜಯವಾಣಿ**
ಸಾಕ್ಷಾತ್ ವರದಿ

'2001ರಿಂದ 2016ರ ತನಕ ಅಧಿಕಾರದಲ್ಲಿದ್ದ ಕಾಂಗ್ರೆಸ್ ಕಾರ್ಮಿಕರ ಕಷ್ಟಕ್ಕೆ ಸ್ಪಂದಿಸಲಿಲ್ಲ. ಈಗ ಹಠಾತ್ತಾಗಿ ದಿನಗೂಲಿ ಬಗ್ಗೆ ಮಾತನಾಡುತ್ತಿದ್ದಾರೆ. 15 ವರ್ಷದಲ್ಲಿ ಸಿಎಂ ತರುಣ್ ಗೋಗೋಯ್ ಕಾರ್ಮಿಕರ ಬವಣೆ ನೀಗಿಸುತ್ತಿದ್ದರೆ, ಈಗ ಬಿಜೆಪಿ ವಿರುದ್ಧ ಮಾತನಾಡುವ ಅಗತ್ಯವೇ ಇರುತ್ತಿರಲಿಲ್ಲ' ಎನ್ನುತ್ತಾರೆ ಹೋಜ್ ವಿಧಾನಸಭೆ ಕ್ಷೇತ್ರದ ಬಿಜೆಪಿ ಮುಖಂಡ ದೀಪನಾಥ್. ಏತನ್ಮಧ್ಯೆ, ಬಿಜೆಪಿ ಸರ್ಕಾರದ ದಿನಗೂಲಿ ಏರಿಕೆ ಕ್ರಮವನ್ನು ಖಾಸಗಿ ಚಹಾ ತೋಟದ ಮಾಲೀಕರು ಕೋರ್ಟ್‌ನಲ್ಲಿ ಪ್ರಶ್ನಿಸಿ, ಮಧ್ಯಂತರ ತಡೆ ತಂದಿದ್ದಾರೆ. ಖಾಸಗಿ ತೋಟಗಳ ಕಾರ್ಮಿಕರ ದಿನಗೂಲಿಯನ್ನೂ ಸರ್ಕಾರವೇ ನಿರ್ಧರಿಸುವುದರಿಂದ, ಮಾಲೀಕರು ಸರ್ಕಾರದ ವಿರುದ್ಧ ಕಾನೂನು ಸಮರಕ್ಕಿಳಿದಿದ್ದಾರೆ. ಹೀಗಾಗಿ, ₹ 351ಕ್ಕೆ ದಿನಗೂಲಿ ಏರಿಸುವುದು ನಿರೀಕ್ಷಿಸಿದಷ್ಟು ಸುಲಭದ ಮಾತೇನಲ್ಲ!





## ಅಸ್ಸಾಂ ಚಹಾದ ಇತಿಹಾಸ

**ಅ**ಸ್ಸಾಂ ಚಹಾದ ಕಥೆ 200 ವರ್ಷಗಳಿಗಿಂತಲೂ ಹಳೆಯದು. 1820ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ರಾಜ್ಯದ ಚಹಾ ತೋಟದ ಚಿತ್ರಣ ಬದಲಾಯಿಸಿತ್ತು. ಆರಂಭದಲ್ಲಿ ನೇಪಾಳ, ಚೀನಾದಿಂದ ತೋಟಕ್ಕೆ ಕಾರ್ಮಿಕರನ್ನು ಕರೆತರಲಾಯಿತು. ಆದರೆ ಅಸ್ಸಾಂನ ಹವಾಮಾನ ಅವರಿಗೆ ಸರಿಹೊಂದಲಿಲ್ಲ. ಇದು ನಷ್ಟಕ್ಕೆಡೆಮಾಡಿತು. ನಂತರ, ಜಾರ್ಖಂಡ್‌ನಿಂದ ಕಾರ್ಮಿಕರು ಬಂದರು. ಸನ್ತಾಲ್, ಮುಂಡಾ, ಖದಿಯಾ, ಉರಾನ್ ಎಂಬ ಆದಿವಾಸಿ ಸಮುದಾಯಗಳು ಅಸ್ಸಾಂನ ಚಹಾ ತೋಟಕ್ಕೆ ಬಂದು ನೆಲೆಸಿದವು. 1860ರಲ್ಲಿ ಬಿಹಾರ, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಮಧ್ಯಪ್ರದೇಶಗಳಿಂದ ಕಾರ್ಮಿಕರನ್ನು ಕರೆತಂದರು. ಭಾರತದ ಒಟ್ಟು ಶೇಕಡ 52 ಮತ್ತು ವಿಶ್ವದ ಚಹಾ ಉತ್ಪಾದನೆಯ ಶೇ.15ರಷ್ಟು ಚಹಾ ಅಸ್ಸಾಂನಲ್ಲೇ ಉತ್ಪಾದನೆಯಾಗುತ್ತಿದೆ. ಆದರೆ, ಶೋಷಣೆ, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ಕೊರತೆ, ಆರ್ಥಿಕ ಬಿಕ್ಕಟ್ಟು ಈಗಲೂ ಕಾರ್ಮಿಕ ಕುಟುಂಬಗಳನ್ನು ನಿತ್ಯವೂ ಕಾಡುತ್ತಿದೆ. ಪ್ರಧಾನಿ ಮೋದಿ ರ್‍ಯಾಲಿಯೊಂದರಲ್ಲಿ, 'ಚಹಾ ಕಾರ್ಮಿಕರ ಬವಣೆ ಚಹಾ ಮಾರುವವನಿಗಿಂತ ಚೆನ್ನಾಗಿ ಬೇರೆ ಯಾರಿಗೆ ತಾನೆ ತಿಳಿದೀತು?' ಎಂದಿದ್ದರು.

## ಉಪ್ಪಿನ ಚಹಾ?!

**ದೇ**ಹದಲ್ಲಿ ನೀರಿಳಿಕೆ ತಗ್ಗಿಸಲೆಂದೇ ಬ್ರಿಟಿಷರ ಕಾಲದಲ್ಲಿ ಕಾರ್ಮಿಕರು ಚಹಾಕ್ಕೆ ಉಪ್ಪನ್ನು ಸೇರಿಸಿ ಕುಡಿಯುತ್ತಿದ್ದರು. ಇದು ಆರೋಗ್ಯಕ್ಕೆ ಹಾನಿಕಾರಕ. ನೂರಾರು ಕಾರ್ಮಿಕರು ಈ 'ಕೆಟ್ಟ' ಚಾಳಿಯನ್ನು ಈಗಲೂ ಮುಂದುವರಿಸಿದ್ದಾರೆ. ಇದು, ಹೈಪರ್‌ಟೆನ್ಷನ್, ಹೃದಯ ಸಂಬಂಧಿ ಕಾಯಿಲೆ, ರಕ್ತದೊತ್ತಡ ಏರಿಕೆ ಸೇರಿ ಹಲವು ಅನಾರೋಗ್ಯಕ್ಕೆ ಕಾರಣವಾಗಿದೆ. ಸಕ್ಕರೆಗೆ ಖರ್ಚು ಮಾಡಲು ಹಣವಿಲ್ಲದಿರುವುದು ಕೂಡ ಉಪ್ಪಿನ ಚಹಾ ಕುಡಿಯಲು ಒಂದು ಕಾರಣ. ಇವೆಲ್ಲವನ್ನು ಪರಿಗಣಿಸಿಯೇ, ಚಹಾ ತೋಟದ ಕಾರ್ಮಿಕರ ಕುಟುಂಬಕ್ಕೆ ಪ್ರತಿ ತಿಂಗಳು 2 ಕೆಜಿ ಸಕ್ಕರೆ ಉಚಿತವಾಗಿ ನೀಡಲಾಗುವುದು ಎಂದು 2019ರಲ್ಲಿ ಮಂಡಿಸಿದ್ದ ರಾಜ್ಯ ಬಜೆಟ್‌ನಲ್ಲಿ ಹಣಕಾಸು ಸಚಿವ ಹಿಮಾಂತ ಬಿಸ್ವ ಶರ್ಮ ಘೋಷಿಸಿದ್ದರು. ತೋಟದ ಕಾರ್ಮಿಕರು ಅವರ ಹಕ್ಕುಗಳನ್ನು ಪ್ರಶ್ನಿಸಿ ತಮ್ಮ ವಿರುದ್ಧ ಬಂಡೇಳಬಾರದು ಎಂದೇ ಅಂದು ಬ್ರಿಟಿಷರು ಚಹಾದಲ್ಲಿ ಉಪ್ಪು ಬೆರೆಸಿ ಕಾರ್ಮಿಕರ ಮಿದುಳನ್ನು ದುರ್ಬಲಗೊಳಿಸುತ್ತಿದ್ದರು ಎಂಬ ವಾದವೂ ಇದೆ. ಸ್ವಾತಂತ್ರ್ಯಾ ನಂತರ ಈ ಚಹಾ ಉದ್ಯಾನಗಳನ್ನು ಖಾಸಗಿ ಕಂಪನಿಗಳಿಗೆ ಹಸ್ತಾಂತರಿಸಿದರೂ, ಉಪ್ಪಿನ ಚಹಾ ಹೀರುವುದು ಕಡಿಮೆಯಾಗಿರಲಿಲ್ಲ. ಆದರೆ, ಈಚಿನ ವರ್ಷಗಳಲ್ಲಿ ಜಾಗೃತಿ ಹೆಚ್ಚಿದ್ದು, ಉಪ್ಪಿನ ಚಹಾದಿಂದ ಕಾರ್ಮಿಕರು ದೂರ ಸರಿಯುತ್ತಿದ್ದಾರೆ.

## ಎಸ್‌ಟಿ ಮಾನ್ಯತೆಗೆ ಒತ್ತಾಯ

**ಸ**ರ್ಕಾರಗಳು ದಿನಗೂಲಿ ಹೆಚ್ಚಿಸದಿರುವುದರಿಂದ ಸಿಟ್ಟಾಗಿರುವ ಕಾರ್ಮಿಕ ಕುಟುಂಬಗಳು ತಮ್ಮ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಮಾನ್ಯತೆ ನೀಡಬೇಕೆಂದು ಒತ್ತಾಯಿಸಿವೆ. ಅಸ್ಸಾಂ ಚಹಾ ಬುಡಕಟ್ಟು ವಿದ್ಯಾರ್ಥಿ ಸಂಘಟನೆ (ಎಟಿಟಿಎಸ್‌ಎ) ಈ ನಿಟ್ಟಿನಲ್ಲಿ ಸಕ್ರಿಯವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಇದೆ. ಪರಿಶಿಷ್ಟ ಪಂಗಡದ ಮಾನ್ಯತೆ ಸಿಕ್ಕರಷ್ಟೇ ದಶಕಗಳ ರೋದನಕ್ಕೆ ಪರಿಹಾರ ಸಿಗಲಿದೆ.



ಈವರೆಗೆ ನಮ್ಮನ್ನು ಶೋಷಿಸಿದ್ದು ಸಾಕು. ಇನ್ನಾದರೂ ನೆಮ್ಮದಿಯಿಂದ ಬದುಕುವಂತೆ ಸರ್ಕಾರಗಳು ಮಾಡಲಿ. ಯಾರು ಎಸ್ಟಿ ಮಾನ್ಯತೆ ನೀಡುತ್ತಾರೋ ಅವರಿಗೆ ನಮ್ಮ ಮತ ಎಂಬ ಮಾತುಗಳು ಕಾರ್ಮಿಕರ 'ಚಾಯ್ ಪೆ ಚರ್ಚಾ'ಗಳಲ್ಲಿ ಜೋರಾಗಿ ಕೇಳುತ್ತಿವೆ.

## ಕರ್ನಾಟಕ ಕಾರ್ಮಿಕರ ಸ್ಥಿತಿ

**ಚಿ**ಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಹಿರೇಬೈಲು, ಸಂಸೆಯಲ್ಲಿರುವ ಗುಮ್ಮನ್‌ಖಾನ್ ಎಸ್ಟೇಟ್ ಹಾಗೂ ಬಾಳೆಹೊನ್ನೂರು ಪ್ಲಾಂಟೇಶನ್ಸ್ ತಲಾ 225 ಹೆಕ್ಟೇರ್, ಹಲಗೇಶ್ವರ 194, ದೇವನ್ ಪ್ಲಾಂಟೇಶನ್ಸ್ 170, ಕೆಳಗೂರು ಎಸ್ಟೇಟ್ 144, ಮೂಡಿಗೆರೆಯ ಮೆರ್ತಿಖಾನ್ ಪ್ಲಾಂಟೇಶನ್ಸ್ 115, ಮೈಸೂರು ಪ್ಲಾಂಟೇಶನ್ಸ್ 113, ಮಾವಿನಕೆರೆ ಎಸ್ಟೇಟ್‌ನ 56 ಹೆಕ್ಟೇರ್‌ನಲ್ಲಿ ಚಹಾವನ್ನು ಕಾಫಿ ಜತೆ ಮಿಶ್ರಬೆಳೆಯಾಗಿ ಬೆಳೆಯಲಾಗುತ್ತಿದೆ. ಈ ಬೆಳೆಯನ್ನು ಅವಲಂಬಿಸಿದ 2 ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ. ಸ್ಥಳೀಯ ಕಾರ್ಮಿಕರ ಜತೆಗೆ ಮಂಗಳೂರು ಮೂಲದವರೂ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಜತೆಗೆ ಅಸ್ಸಾಂನ ವಲಸೆ ಕಾರ್ಮಿಕರೂ ಇಲ್ಲಿ ದುಡಿಯುತ್ತಿದ್ದಾರೆ. ಕಳೆದ ನಾಲ್ಕೈದು ವರ್ಷಗಳಲ್ಲಿ ಬೆಲೆಯ ಏರಿಳಿತ ಹಾಗೂ ಮಾರುಕಟ್ಟೆ ಅವ್ಯವಸ್ಥೆಯಿಂದ ಬೆಳೆಗಾರರ ಜತೆಗೆ ಕಾರ್ಮಿಕರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾರ್ಮಿಕರಿಗೆ ವಾಸ್ತವ್ಯಕ್ಕೆ ಎಸ್ಟೇಟ್‌ನವರೇ ಮನೆಗಳನ್ನು ಕೊಟ್ಟಿದ್ದಾರೆ. ಅವರಿಗೆ ಇಎಸ್‌ಐ, ಪಿಎಫ್, ಒಟಿ ಮತ್ತಿತರ ಸೌಲಭ್ಯಗಳ ಜತೆಗೆ ಚಹಾ ಎಲೆ ಕೊಯ್ಯುವವರಿಗೆ ದಿನಕ್ಕೆ ₹ 345 ಕೊಡುತ್ತಾರೆ.

UASB LIBRARY
Newspaper Clippings
Pg .3 Thursday 25-03-2021 Jai Kisan

# ವಾಯುಗುಣ ಶುದ್ಧೀಕರಿಸಲಿದೆ ಒಣ ಹುಲ್ಲು!

## ಪೆಟ್ರೋಲಿಯಂ ಇಂಧನದ ಹಂಗಿಲ್ಲದಂತೆ ಮಾಡಲಿದೆ ಕಂಪ್ರೆಸ್ಡ್ ಬಯೊಗ್ಯಾಸ್

• ಶ್ರೀಗುರು

**ಪೆಟ್ರೋಲ್**, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆ ಇಸ್ರೊದವರು ಹಾರಿಸಿದ ರಾಕೆಟ್‌ಗಳಂತೆ ಮೇಲಕ್ಕೇರುತ್ತಿರುವಾಗ ಜರ್ಮನಿಯ ವರ್ಬಿಯೋ ಕಂಪನಿಯು ವಾಹನ ಸವಾರರಿಗೆ, ಗೃಹಿಣಿಯರಿಗೆ ಸಂತಸದ ಸುದ್ದಿ ನೀಡಿದೆ. ಅದೇನೆಂದರೆ, ನಿಮ್ಮ ವಾಹನಗಳನ್ನು ಓಡಿಸಲು ಇನ್ನು ಮುಂದೆ ಪೆಟ್ರೋಲ್, ಡೀಸೆಲ್ ಬೇಕಿಲ್ಲ! ಬದಲಿಗೆ ಭತ್ತದ ಗದ್ದೆಯ ಒಣ ಹುಲ್ಲೇ ಸಾಕು!

ಪಂಜಾಬ್‌ನ ಸಂಗ್ರೂರ ಜಿಲ್ಲೆಯ ಭೂತಲ್ ಕಲನ್ ಹಳ್ಳಿಯ ಭತ್ತದ ಗದ್ದೆಯ ನಡುವೆಯೇ ಭತ್ತದ ಕೂಳೆಯಿಂದ ಒತ್ತಡೀಕರಿಸಿದ ಜೈವಿಕ ಅನಿಲ (ಕಂಪ್ರೆಸ್ಡ್ ಬಯೊ ಗ್ಯಾಸ್) ತಯಾರಿಸುವ ಘಟಕ ಸ್ಥಾಪಿಸಿರುವ ಕಂಪನಿ, ಎರಡು ಟನ್ ಭತ್ತದ ಹುಲ್ಲಿನಿಂದ ವರ್ಷವಿಡೀ ಕಾರು ಓಡಿಸಬಹುದು ಎಂಬ ಭರವಸೆ ನೀಡಿದೆ. ಹಾಗೇನಾದರೂ ಆದಲ್ಲಿ ಎರಡು ನೇರ ಲಾಭಗಳಿವೆ. ಒಂದು, ದಿನೇ ದಿನೇ ದುಬಾರಿಯಾಗುತ್ತಿರುವ ಪೆಟ್ರೋಲ್, ಡೀಸೆಲ್‌ಗಳನ್ನು ಮರೆತು, ಬಯೊಗ್ಯಾಸ್ ಬಳಸಿ ಹಾಯಾಗಿ ವಾಹನ ಓಡಿಸಬಹುದು. ಎರಡನೆಯದು, ದೆಹಲಿ, ಹರಿಯಾಣ, ಪಂಜಾಬ್‌ನಲ್ಲಿ ಭತ್ತದ ಕೂಳೆ ಸುಡುವುದನ್ನು ನಿಲ್ಲಿಸಿ, ಹಬ್ಬುತ್ತಿರುವ ವಾಯುಮಾಲಿನ್ಯವನ್ನು ತಡೆಯಬಹುದು.

ಯೋಜಿಸಿದಂತೆ ಎಲ್ಲವೂ ನಡೆದರೆ, ಬರುವ ಜೂನ್ ವೇಳೆಗೆ ಕಂಪನಿ ಸ್ಥಾಪಿಸುವ ಬಯೊಗ್ಯಾಸ್ ಘಟಕಗಳು ಕಾರ್ಯಾರಂಭ ಮಾಡಿ ಇಂಧನ ಸಮಸ್ಯೆಯನ್ನು ತಕ್ಕ ಮಟ್ಟಿಗೆ ಪರಿಹರಿಸುತ್ತವೆ. ಭತ್ತದ ಕೂಳೆಯಿಂದ ತಯಾರಾಗುವ ಕಂಪ್ರೆಸ್ಡ್ ಬಯೊಗ್ಯಾಸ್ ಈಗ ಬಳಕೆಯಲ್ಲಿರುವ ಪೆಟ್ರೋಲಿಯಂ ಇಂಧನ ಮೂಲದ ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (CNG) ಅನ್ನು ರಿಪ್ಲೇಸ್ ಮಾಡುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಸರಿಯಾಗಿ ಯೋಚಿಸಿದರೆ ಇನ್ನೆರಡು ವರ್ಷಗಳಲ್ಲಿ 5,000 ಸಿಬಿಜಿ ಘಟಕಗಳು ತಲೆ ಎತ್ತುತ್ತವೆ.

ಕೇಂದ್ರ ಸರ್ಕಾರವು ಸತತ್ (SATAT)- ಸಸ್ಟೇನಬಲ್ ಆಲ್ಟರ್ನೇಟಿವ್ ಟುವರ್ಡ್ಸ್ ಅಫೋರ್ಡಬಲ್ ಟ್ರಾನ್ಸ್‌ಪೋರ್ಟೇಶನ್ ಯೋಜನೆಯ ಅಡಿ ಈ ಸಾಲಿನಲ್ಲಿ 900 ಕಂಪ್ರೆಸ್ಡ್ ಬಯೊಗ್ಯಾಸ್ ಘಟಕಗಳನ್ನು ದೇಶದ ವಿವಿಧೆಡೆ ಸ್ಥಾಪಿಸಲು ಜೆಬಿಮ್, ಅದಾನಿ ಗ್ಯಾಸ್, ಪೆಟ್ರೊನೆಟ್ ಎಲ್‌ಎನ್‌ಜಿ ಟೊರೆಂಟ್ ಗ್ಯಾಸ್‌ನಂಥ ಬೃಹತ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಮೂವತ್ತು ಸಾವಿರ ಕೋಟಿ ರೂಪಾಯಿಗಳನ್ನು ವ್ಯಯಿಸಲಿದೆ. 2023ರ ವೇಳೆಗೆ ದೇಶದಾದ್ಯಂತ ಒಟ್ಟು 15 ದಶಲಕ್ಷ ಮೆಟ್ರಿಕ್ ಟನ್ ಅನಿಲವನ್ನು ಉತ್ಪಾದಿಸುವ ಗುರಿಯೂ ಇದ್ದು ಲಕ್ಷಾಂತರ ಉದ್ಯೋಗಾವಕಾಶಗಳು ತೆರೆದುಕೊಳ್ಳಲಿವೆ.

ಸಿಬಿಜಿಯನ್ನು ಕೃಷಿ ತ್ಯಾಜ್ಯ, ಜಾನುವಾರು ಸಗಣಿ, ಹಿಂಡಿ ಬಿಸಾಕಿದ ಕಬ್ಬಿನ ಚರಟ, ಡಿಸ್ಟಿಲರಿ ಘಟಕಗಳ ತ್ಯಾಜ್ಯ, ಗಟಾರದ ನೀರು, ಊರು- ನಗರಗಳ ಘನ ತ್ಯಾಜ್ಯ, ಕಾರ್ಖಾನೆಗಳ ಸಂಸ್ಕರಿಸಬಹುದಾದ ತ್ಯಾಜ್ಯ ಮತ್ತು ಅರಣ್ಯ ತ್ಯಾಜ್ಯಗಳನ್ನು ಬಳಸಿ ತಯಾರಿಸಲಾಗುತ್ತದೆ. ಅಡುಗೆ ಅನಿಲದಷ್ಟೇ ದಹನ ಸಾಮರ್ಥ್ಯ (ಕ್ಯಾಲೋರಿಫಿಕ್ ವ್ಯಾಲ್ಯು) ಹೊಂದಿರುವ ಸಿಬಿಜಿಯನ್ನು ವಾಹನ, ಕಾರ್ಖಾನೆ, ಅಡುಗೆ ಮತ್ತು ಇತರ ವಾಣಿಜ್ಯ ಅಗತ್ಯಗಳಿಗೆ ಅನಾಯಾಸವಾಗಿ ಬಳಸಬಹುದು.

ಅಂದುಕೊಂಡಂತೆ ಕೆಲಸ ನಡೆದರೆ ಇದೇ ವರ್ಷಾಂತ್ಯಕ್ಕೆ ಕಚ್ಚಾ ತೈಲದ ಆಮದನ್ನು ಶೇ 10ರಷ್ಟು ಕಡಿಮೆ ಮಾಡಬಹುದಾಗಿದೆ. ಉತ್ಪಾದನೆಗೆ ಬೇಕಾದ ತಂತ್ರಜ್ಞಾನ ಪಡೆಯಲು ಇಂಡಿಯನ್ ಆಯಿಲ್, ಪ್ರಜ್ ಇಂಡಸ್ಟ್ರೀಸ್, ಭಾರತ್ ಬಯೊಗ್ಯಾಸ್ ಮತ್ತು ಸಿಇಐಡಿ ಕನ್‌ಸಲ್ಟೆಂಟ್‌ಗಳ ಜೊತೆಯೂ ಒಪ್ಪಂದಕ್ಕೆ ಸಹಿ ಮಾಡಿರುವ ಕೇಂದ್ರ ಸರ್ಕಾರ, ನಿರೀಕ್ಷಿತ ಬಂಡವಾಳ ಸಿಕ್ಕೇ ಸಿಗುತ್ತದೆ ಎಂಬ ಉಮೇದಿನಲ್ಲಿದೆ. ಯೋಜನೆಯನ್ನು ಯಶಸ್ವಿಗೊಳಿಸಲು ಸ್ಪಷ್ಟ ಕ್ರಿಯಾಯೋಜನೆ ತಯಾರಾಗಿದ್ದು, ಸಿಬಿಜಿ ತಯಾರಿಕೆಯಿಂದ ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ನಾವು ಮಾಡುತ್ತಿರುವ ಖರ್ಚಿನಲ್ಲಿ ಶೇ 40ರಷ್ಟನ್ನು ಉಳಿಸಬಹುದೆಂಬ ಲೆಕ್ಕಾಚಾರವಿದೆ.

ಈಗಾಗಲೇ ಪ್ರಾಯೋಗಿಕ ಕಾರ್ಯಾಚರಣೆ ಶುರು ಮಾಡಿರುವ ಜರ್ಮನಿಯ ವರ್ಬಿಯೋ, ಉತ್ತರ ಭಾರತದ ಭತ್ತದ ಬೆಳೆಗಾರರಿಂದ ಭತ್ತದ ಹುಲ್ಲು ಖರೀದಿಸಲು ಟನ್‌ಗೆ ₹ 600 ನಿಗದಿ ಮಾಡಿ, ಹುಲ್ಲನ್ನು ಸುಡದೆ ತಮಗೇ ನೀಡುವಂತೆ ಮನವಿ ಮಾಡಿದೆ. ದಿನಕ್ಕೆ 350 ಟನ್ ಬೆಳೆ ತ್ಯಾಜ್ಯವನ್ನು ಬಳಸಿಕೊಂಡು 33 ಟನ್ ಸಿಬಿಜಿಯನ್ನು ಉತ್ಪಾದಿಸಿ ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ.



ಅನಿಲ ಉತ್ಪಾದನೆಯ ನಂತರ ಉಳಿಯುವ ತ್ಯಾಜ್ಯದಿಂದ ವಾರ್ಷಿಕ 5 ಕೋಟಿ ಟನ್ ಜೈವಿಕ ಗೊಬ್ಬರ ತಯಾರಿಸಬಹುದು. ಬೆಳೆ ಬೆಳೆಯಲು ಇದನ್ನು ಉಪಯೋಗಿಸಿದರೆ ಇಳುವರಿ ಶೇ 20ರಷ್ಟು ಹೆಚ್ಚುತ್ತದೆ ಎಂದಿರುವ ಪಂಜಾಬ್ ಅಗ್ರಿ ಯೂನಿವರ್ಸಿಟಿಯ ವಿಜ್ಞಾನಿಗಳು, ತ್ಯಾಜ್ಯದಲ್ಲಿ ಉಳಿಯುವ ಸಿಲಿಕಾ, ಬೆಳೆ ಪ್ರಮಾಣವನ್ನು ಹೆಚ್ಚಿಸುವುದಲ್ಲದೆ ಭಾರದ ಲೋಹಗಳಾದ ಆರ್ಸೆನಿಕ್, ಕ್ಯಾಡ್ಮಿಯಂ, ಸೀಸಗಳು ಸಸ್ಯಕ್ಕೆ ಸೇರ್ಪಡೆಯಾಗದಂತೆ ನೋಡಿಕೊಂಡು ರಸಗೊಬ್ಬರಗಳ ಬಳಕೆಯನ್ನೂ ತಡೆಯುತ್ತದೆ ಎಂದು ಖಚಿತವಾಗಿ ಹೇಳುತ್ತಾರೆ. ಜೈವಿಕ ಗೊಬ್ಬರದಲ್ಲಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಜಾಸ್ತಿ ಇರುವುದರಿಂದ ಹೊಲ ಗದ್ದೆಗಳಿಗೆ ಹೆಚ್ಚಿನ ನೀರೂ ಬೇಕಾಗುವುದಿಲ್ಲ.

ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಿ ವಾಯುಗುಣ ಶುದ್ಧೀಕರಣಕ್ಕೆ ಪಣ ತೊಟ್ಟಿರುವ ನಾವು, ಸಿಬಿಜಿ ಬಳಕೆಯಿಂದ ಪೆಟ್ರೋಲಿಯಂ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ಸಿಕ್ಕಿರುವ ಸದವಕಾಶವನ್ನು ಯಾವ ಕಾರಣಕ್ಕೂ ಕೈಚೆಲ್ಲಬಾರದು.

25-03-2021 Pv Pg 08